ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 892

ಸದಸ್ಯರ ಹೆಸರು ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವವರು ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ 21-12-2021

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳು ಬೆಳಕಿಗೆ ಬಂದಿವೆಯೇ;</td><td>ಹೌದು</td></tr>
<tr><td>ಆ)</td><td>ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ದಾಖಲಾದಂತಹ ಪ್ರಕರಣಗಳ ಸಂಖ್ಯೆ ಎಷ್ಟು;</td><td>ಒಳಾಡಳಿತ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರ ಹಕ್ಕುಗಳ ಉಲ್ಲಂಘನೆ ಸಂಬಂಧ ದಾಖಲಾದ ಪ್ರಕರಣಗಳ ಸಂಖ್ಯೆ:

<table>
<tr><th>ಅಪರಾಧ ಶೀರ್ಷಿಕೆ</th><th>2018</th><th>2019</th><th>2020</th><th>2021</th></tr>
<tr><td>ಅತ್ಯಾಚಾರ</td><td>486</td><td>495</td><td>480</td><td>507</td></tr>
<tr><td>ಲೈಂಗಿಕ ದೌರ್ಜನ್ಯ</td><td>4981</td><td>4763</td><td>4542</td><td>4428</td></tr>
<tr><td>ವರದಕ್ಷಿಣೆ ಸಾವು</td><td>197</td><td>192</td><td>175</td><td>149</td></tr>
<tr><td>ವರದಕ್ಷಿಣೆ ಕಿರುಕುಳ</td><td>1597</td><td>1782</td><td>1532</td><td>1631</td></tr>
<tr><td>ಗಂಡ/ಗಂಡನ ಮನೆಯವರಿಂದ ಕಿರುಕುಳ</td><td>2027</td><td>2436</td><td>2031</td><td>2115</td></tr>
</table>

ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಕೌಟುಂಬಿಕ ದೌರ್ಜನ್ಯ,ರಕ್ಷಣೆ, ವರದಕ್ಷಿಣೆ ಕಿರುಕುಳ ಮತ್ತು ಸಾವು, ಅತ್ಯಾಚಾರ ಮತ್ತು ಸಾವು, ಲೈಂಗಿಕ ಕಿರುಕುಳ, ಕೆಲಸದ ಸ್ಥಳದಲ್ಲಿ ಕಿರುಕುಳ, ಪ್ರೇಮ ಪ್ರಕರಣ, ಜೀವನಾಂಶ, ಮಕ್ಕಳ ಅಭಿರಕ್ಷೆ, ವಸತಿ ಕಲ್ಪಿಸುವ ಬಗ್ಗೆ, ಆಸ್ತಿ ವಿವಾದ, ಪೊಲೀಸ್ ದೌರ್ಜನ್ಯ, ಹಣ ವಂಚನೆ, ವಿಚ್ಛೇಧನೆ, ಜಾತಿ ನಿಂದನೆ, ಸೈಬರ್ ಕ್ರೈಮ್ ಇತ್ಯಾದಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ದಾಖಲಾದಂತಹ ಪ್ರಕರಣಗಳ ಸಂಖ್ಯೆ:
2018-19 --2696
2019-20 --2149
2020-21 --2456

ಒಳಾಡಳಿತ ಇಲಾಖೆಯಲ್ಲಿ ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ವಿವರ.
<table>
<tr><th>ಅಪರಾಧ ಶೀರ್ಷಿಕೆ</th><th>2018</th><th>2019</th><th>2020</th><th>2021</th></tr>
<tr><td>ಜೆ.ಜೆ. ಆಕ್ಟ್</td><td>50</td><td>48</td><td>40</td><td>67</td></tr>
<tr><td>ಬಾಲ್ಯ ವಿವಾಹ</td><td>74</td><td>108</td><td>180</td><td>223</td></tr>
<tr><td>ಬಾಲ ಕಾರ್ಮಿಕ ಪದ್ಧತಿ</td><td>64</td><td>81</td><td>54</td><td>50</td></tr>
<tr><td>ಮಕ್ಕಳ ಲೈಂಗಿಕ ದೌರ್ಜನ್ಯ</td><td>651</td><td>583</td><td>567</td><td>709</td></tr>
<tr><td>ಮಕ್ಕಳ ಮೇಲಿನ ಅತ್ಯಾಚಾರ</td><td>1410</td><td>1613</td><td>1574</td><td>1761</td></tr>
</table>
</td></tr>
</table>

		ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳ ಸಂಖ್ಯೆ: 2018-19 --201 2019-20 --449 2020-21 --265
ಇ)	ಅಂತಹ ಪ್ರಕರಣಗಳ ತ್ವರಿತ ಪರಿಹಾರಕ್ಕಾಗಿ ಸರ್ಕಾರವು ನಿಗದಿಪಡಿಸಿದ ಕಾನೂನುಗಳು/ನಿಯಮಗಳು/ ಮಾರ್ಗಸೂಚಿಗಳು ಮತ್ತು ಮಹಿಳಾ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಪರಿಣಾಮಕಾರಿ ಅನುಷ್ಠಾನಗೊಳಿಸಲು ಹಾಕಿಕೊಂಡಿರುವ ಯೋಜನೆಗಳೇನು?	ಅಂತಹ ಪ್ರಕರಣಗಳ ಬಗ್ಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಪ್ರಕರಣಗಳನ್ನು ಪರಿಶೀಲಿಸಿ, ಸಂಬಂದಪಟ್ಟ ಪ್ರಾದಿಕಾರಗಳಾದ, ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ, ಮುಖ್ಯಕಾರ್ಯ ನಿರ್ವಹಣಾಧಿಕಾರಿ, ಉಪನಿರ್ದೇಶಕರು, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಮತ್ತು ಇತರೆ ಕಚೇರಿಗಳಿಂದ ವರದಿ ಪಡೆದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. ದೌರ್ಜನ್ಯಕ್ಕೊಳಗಾದ ಎಲ್ಲಾ ಪ್ರಕರಣಗಳಿಗೆ ಒಳಾಡಳಿತ ಇಲಾಖೆಯಿಂದ ಆರ್ಥಿಕ ಪರಿಹಾರವನ್ನು National Victim Compensation Scheme ರಡಿ ನೀಡಲಾಗುತ್ತಿದೆ. ಮಕ್ಕಳಿಗೆ ತ್ವರಿತವಾಗಿ ನಿಯಮಾನುಸಾರ ಆರೈಕೆಯನ್ನು ನೀಡಲು ಕೆಳಕಂಡ ಕಾನೂನು ಹಾಗೂ ಮಾರ್ಗಸೂಚಿಯಡಿ ಅವಕಾಶ ಕಲ್ಪಿಸಲಾಗಿದೆ. • ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಹಾಗೂ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮ 2016 • ಮಕ್ಕಳ ಮೇಲಿನ ಲೈಂಗಿಕ ಅಪರಾಧ ತಡೆ ಕಾಯ್ದೆ 2012 ಹಾಗೂ ಮಕ್ಕಳ ಮೇಲಿನ ಲೈಂಗಿಕ ಅಪರಾಧ ತಡೆ ನಿಯಮ 2020. • Commission for Protection of Child Right Act 2005. • ಬಾಲ ಕಾರ್ಮಿಕ ನಿಷೇಧ ಕಾಯ್ದೆ. • ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಹಾಗೂ ಬಾಲ್ಯ ವಿವಾಹ ನಿಷೇಧ ನಿಯಮ 2016. • ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿ 2014. ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಮಾನ್ಯ ಮುಖ್ಯಮಂತ್ರಿಗಳ ಬಾಲಸೇವಾ ಯೋಜನೆ, ಬಾಲಹಿತೈಷಿ, ಉಪಕಾರ್ ಯೋಜನೆ ಮತ್ತು ವಿಶೇಷ ಪಾಲನಾ ಯೋಜನೆ ಹಾಗೂ ಪ್ರಾಯೋಜಕತ್ವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸ್ವತಂತ್ರ ಶಾಸನಬದ್ಧ ಅಂಗ ಸಂಸ್ಥೆಯಾಗಿರುತ್ತದೆ. ಮಕ್ಕಳ ಹಕ್ಕುಗಳನ್ನು ರಕ್ಷಿಸಿ ಬೆಂಬಲ ನೀಡಲು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ರಚಿಸಲಾಗಿದೆ.

ಸಂಖ್ಯೆ: ಮಮಇ 14 ಮಭಾಬ 2021

Halappa B A

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.